**<u>ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಗೆ ಪುನಃ ದಿನಾಂಕ 30-03-2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ.ಬಿ.ಬಿ.ಡಿ.ವಕೀಲರಿಂದ</u>**

ನಾನು ದಿಃ 23-11-2004 ರ ಒಂದು ಮೂಲ ಖರೀದಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು.ತೆರಿಗೆ ನಿರ್ಧರಣ ಪಟ್ಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಬಿ.ಎಸ್.ಬಿ. ವಕೀಲರಿಂದಃ</u>**

ಸದರಿ ನಿಪಿ-9 ಮತ್ತು 10 ರ ದಾಖಲಾತಿಗಳನ್ನು 1 ಮತ್ತು 3 ನೇ ಪ್ರತಿವಾದಿ ಹಾಗೂ ಸದರಿಯವರ ತಂದೆ ತಾಯಿಗಳು ಕೂಡಿ ನನ್ನ ಬಳಿ ನೀಡಿರುತ್ತಾರೆ. ನಿಪಿ-9 ಮತ್ತು 10 ರ ದಾಖಲಾತಿಗಳು 1 ಮತ್ತು 3 ನೇ ಪ್ರತಿವಾದಿಗಳ ತಂದೆಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ನಿಪಿ-9 ಮತ್ತು 10 ರ ದಾಖಲಾತಿಗಳನ್ನು ನಾನು ಅಡವು ಇಟ್ಟುಕೊಂಡು ಹಣ ನೀಡುವ ಅಧಿಕಾರ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು ಹಣವನ್ನು 1 ಮತ್ತು 3 ನೇ ಪ್ರತಿವಾದಿಗಳ ತಂದೆಗೆ ನೀಡಿದ್ದು, ಸದರಿಯವರೇ ಹಣವನ್ನು ನನಗೆ ವಾಪಸ ನೀಡಲು ಭಾದ್ಯತೆ ಹೊಂದಿರುತ್ತಾನೆ ಎಂದರೆ ಸರಿಯಲ್ಲ.

ನಿಪಿ-9 ಮತ್ತು 10 ರ ದಾಖಲಾತಿಗಳಿಗೂ ಮತ್ತು ಈ ದಾವೆಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.